ಶ್ರೀ ಕಾಗೋಡು ತಿಮ್ಮಪ್ಪ.—ಇದು ಪಂಚಾಂಗ ನೋಡಿ ಹೇಳತಕ್ಕ ವಿಚಾರವಲ್ಲ. ಇದು ಕೇಂದ್ರ ಸರ್ಕಾರದ ತೀರ್ಮಾನವನ್ನು ಅವಲಂಬಿಸಿದೆ.

ಶ್ರೀ ಡಿ.ವಿ. ಪೈಗಾಂಕರ್.—ಕಾರವಾರ ಬಂದರನ್ನು ಅಭಿವೃದ್ಧಿಪಡಿಸುವುದರ ಮಹತ್ವವನ್ನು ತಾವು ಅರಿತಿದ್ದೀರಿ. ಅದರ ಹಿನ್ನೆಲೆಯಲ್ಲಿ ಆಷ್ಟೇ ತೀವ್ರಗತಿಯಿಂದ ರೈಲು ಮಾರ್ಗವನ್ನು ಮಾಡುವ ಬಗ್ಗೆ ಗಮನ ಹರಿಸಿದ್ದೀರಾ ಎಂದು ಕೇಳಂತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಮುಖ್ಯಮಂತ್ರಿಯವರು ನೇರವಾಗಿ ಮಾನ್ಯ ಪ್ರಧಾನ ಮಂತ್ರಿಯವರಿಗೆ ಪತ್ರ ಬರೆದು ಚರ್ಚೆ ಮಾಡಿರುವಾಗ ಸರ್ಕಾರಕ್ಕೆ ಎಷ್ಟು ಕಳಕಳಿ ಇದೆ ಎಂಬುದನ್ನು ಮಾನ್ಯ ಸದಸ್ಯರು ಮನಗಾಣಬೇಕು.

Grant of land for the construction of Nursery School and Hospital Building

858. SRI V.L. SHIVAPPA (Tiptur).—Will the Minister for Revenue be pleased to state.—

(a) whether the Panchayat Masavanagatta, Nonavinakere Hobli, Tiptur Taluk have forwarded a resolution to the Government requesting for grant of 5 acres of land for the construction of Nursery School & Hospital Buildings;

(b) if so, the steps taken by the Government in this regard ?

SRI MALLIKARJUNA M. KHARGE (Minister for Revenue).—

(a) Yes.

(b) Directions have been issued on 23-5-1981 to the Special Deputy Commissioner, Tumkur for grant of land to Village Panchayat for Community Welfare measures exclusively as intended by the Village Panchayat.

ಶ್ರೀ ವಿ.ಎಲ್. ಶಿವಪ್ಪ.—ಮಾನ್ಯ ಅಧ್ಯಕ್ಷರೇ, ತಿಪಟೂರು ತಾಲ್ಲೂಕು ನೊಣವಿನಕೆರೆ ಹೋಬಳಿ ಮಸವನಗಟ್ಟದ ಪಂಚಾಯಿತಿಯವರು ಶಿಶುವಿಹಾರ, ಆಸ್ಪತ್ರೆ ಕಟ್ಟಡ ಕಟ್ಟಲು ೫ ಎಕರೆ ಭೂಮಿಯನ್ನು ಮಂಜೂರು ಮಾಡಲು ಸರ್ಕಾರವನ್ನು ಪ್ರಾರ್ಥಿಸಿ ತೀರ್ಮಾನವೊಂದನ್ನು ಕಳುಹಿಸಿದ್ದಾರೆ ಎಂಬುದಕ್ಕೆ 'ಹೌದು' ಎಂದು ಮಾನ್ಯ ಮಂತ್ರಿಯವರು ಉತ್ತರ ಕೊಟ್ಟಿದ್ದಾರೆ. ಜಮೀನನ್ನು ಗ್ರಾಮ ಪಂಚಾಯಿತಿಗೆ ಕೊಡುವಂತೆ ದಿನಾಂಕ ೨೩-೫-೧೯೮೧ರಲ್ಲಿ ವಿಶೇಷ ಜಿಲ್ಲಾಧಿಕಾರಿಯವರಿಗೆ ಸರ್ಕಾರದಿಂದ ಆದೇಶ ಕೊಟ್ಟಿದ್ದೇವೆ ಎಂದು ಅವರು ಹೇಳಿದ್ದಾರೆ. ೧೦ ತಿಂಗಳ ಹಿಂದೆ ಜಿಲ್ಲಾಧಿಕಾರಿಗಳಿಗೆ ಕೊಟ್ಟ ಆದೇಶವನ್ನು ಜಿಲ್ಲಾಧಿಕಾರಿಗಳು ಇನ್ನೂ ಪರಿಪಾಲಿಸಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಆದೇಶ ಕೊಟ್ಟಿದ್ದೇವೆ ಎಂದು ನಾವು ಹೇಳಿದ್ದೇವೆ. ಆದರೆ ಆದೇಶ ಪರಿಪಾಲಿಸಿಲ್ಲ ಎಂಬ ಅಂಶ ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ವಿ.ಎಲ್. ಶಿವಪ್ಪ.—ಮಾನ್ಯ ಅಧ್ಯಕ್ಷರೇ, ೧೦ ತಿಂಗಳ ಹಿಂದೆ ಕೊಟ್ಟ ಆದೇಶವನ್ನು ಪರಿಪಾಲಿಸಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಮಾನ್ಯ ಮಂತ್ರಿಯವರು ಹೇಳುತ್ತಿದ್ದಾರೆ. ಈಗಲಾದರೂ ಸರ್ಕಾರದವರು ನಿಗಾ ವಹಿಸಿ ಸರ್ಕಾರದ ಆಜ್ಞೆಯನ್ನು ಪರಿಪಾಲಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆಪ್ಪಣೆ ಕೊಡಿಸುವುದಕ್ಕಾಗುತ್ತದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಕೆಲಸ ಆಗಿಲ್ಲ ಎಂಬುದು ಮಾನ್ಯ ಸದಸ್ಯರಿಗೆ ಗೊತ್ತಾಗಿದ್ದರೆ, ಆದನ್ನು ನಮಗೆ ತಿಳಿಸಿದರೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು.—ಮಾನ್ಯ ಡಿ. ಟಿ. ಮಾಯಣ್ಣನವರ ಪ್ರಶ್ನೆಯನ್ನು ತಡೆಹಿಡಿಯಲಾಗಿದೆ. ಈಗ ಪ್ರಶ್ನೋತ್ತರ ಕಾಲ ಮುಗಿಯುತ್ತದೆ.